**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ**

**ನಂದಿನಗರ, ಬೀದರ–585 401 ಕರ್ನಾಟಕ**

**ಕುಲಸಚಿವರ ಕಾರ್ಯಾಲಯ**

ದೂರವಾಣಿ: ಕಛೇರಿ: 08482-245241/245360
ಫ್ಯಾಕ್ಸ್ ನಂ. : 08482-245360
ವೆಬ್‌ಸೈಟ್ : www.kvafsu.kar.nic.in

ಸಂಖ್ಯೆ:ಕುಸ/ಕಪಪಮೀವಿವಿಬೀ/ಪಸಂ/2017–18 ದಿನಾಂಕ: 05–09–2017

# ಪರೀಷ್ಕೃತ ಅಧಿಸೂಚನೆ

**ವಿಷಯ:** 2017–2018ನೇ ಶೈಕ್ಷಣಿಕ ಸಾಲಿನ ಪಶುಸಂಗೋಪನಾ ಡಿಪ್ಲೋಮಾ ಪ್ರವೇಶ ಕುರಿತು.

**ಉಲ್ಲೇಖ:** 1. ಸಂಖ್ಯೆ:ಕುಸ/ಶೈಕ್ಷಣಿಕ/ಪಸಂ/ಡಿ–ಪ್ರವೇಶ/2017–18 ದಿನಾಂಕ:03–07–2017
2. ಸಂಖ್ಯೆ:ಕುಸ/ಕಪಪಮೀವಿವಿಬೀ/ಪಸಂ/2017–18 ದಿನಾಂಕ:18.08.2017
3. ಪಶುಸಂಗೋಪನಾ ಸಮಿತಿಯ ಶಿಫಾರಸ್ಸು ದಿನಾಂಕ:12–07–2017
4. ಮಾನ್ಯ ಕುಲಪತಿಯವರ ಅನುಮೋದನೆ, ಕಪಪಮೀವಿವಿ, ಬೀದರ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸದಂತೆ, 2017–2018ನೇ ಶೈಕ್ಷಣಿಕ ಸಾಲಿನ ಪಶುಸಂಗೋಪನಾ ಡಿಪ್ಲೋಮಾ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ವೆಬ್‌ನಲ್ಲಿ (www.kvafsu.edu.in) ಪ್ರಕಟಿಸಲಾಗಿದ್ದು ತಮ್ಮ ಅರ್ಹತೆಯನ್ನು ದೃಡಪಡಿಸಿಕೊಂಡು. ಅರ್ಹ ಅಭ್ಯರ್ಥಿಗಳು ದಿನಾಂಕ 11–09–2017 ರಂದು ಮುಂಜಾನೆ 9:00 ರಿಂದ ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರಿನಲ್ಲಿ ನಡೆಯುವ ಕೌನ್ಸಲಿಂಗ್‌ಗೆ ತಮ್ಮ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಕಂಡ ಶುಲ್ಕವನ್ನು ಕೌನ್ಸಲಿಂಗ್ ದಿನದಂದೆ ಭರಿಸಬೇಕು.

2017–18 ನೇ ಸಾಲಿನ ಡಿಪ್ಲೋಮಾ ಪ್ರವೇಶಕ್ಕಾಗಿ ನಿಗದಿಪಡಿಸಿದ ಶುಲ್ಕದ ವಿವರ ಈ ಕೆಳಗಿನಂತಿದೆ.

| | | |
|---|---|---|
| ಸಾಮಾನ್ಯ ವರ್ಗ | – | ರೂ.4180/– |
| ಎಸ್.ಸಿ./ಎಸ್.ಟಿ./ಪ್ರವರ್ಗ–1 | – | ರೂ.946/– |

(ಗುರುತಿನ ಚೀಟಿ ಮತ್ತು ಜೀವವಿಮೆ ಶುಲ್ಕವನ್ನು ಕಾಲೇಜುಗಳಲ್ಲಿ ನಿಗದಿಪಡಿಸಿದಂತೆ ಭರಿಸಬೇಕು)

ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ (ಕೊನೆಹಳ್ಳಿ/ಶಿಗ್ಗಾಂವ/ಕೋರವಂಗಲ/ಬರ್ಗಿ/ಡೋರ್ನಳ್ಳಿ) ಡಿಪ್ಲೋಮಾ ಪ್ರವೇಶಾತಿಗಾಗಿ ಸೀಟು ಹಂಚಿಕೆಯನ್ನು ಅರ್ಹ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಕೌನ್ಸಿಲಿಂಗ್‌ನಲ್ಲಿ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಿಸಿದ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಶುಂಪಾಲರಿಗೆ ದಿನಾಂಕ:21–09–2017 ರಂದು ಅಥವಾ ಅದಕ್ಕೂ ಮುಂಚೆ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಪ್ರವೇಶ ರದ್ದುಪಡಿಸಲಾಗುವುದು.

ಉಲ್ಲೇಖ(2) ರಂತೆ ಹೊರಡಿಸಲಾದ ಅಧಿಸೂಚನೆಯನ್ನು ರದ್ದುಪಡಿಸಿ ಈ ಪರಿಷ್ಕೃತ ಅಧಿಸೂಚನೆ ಹೊರಡಿಸಿದೆ.

ಆದೇಶದ ಮೇರೆಗೆ,

ಸಹಿ/–

**ಕುಲಸಚಿವರು**

ಪ್ರತಿ: 1. ವಿಸ್ತರಣಾ ನಿರ್ದೇಶಕರು, ಕಪಪಮೀಇವಿ, ಬೀದರ ಇವರಿಗೆ ಮಾಹಿತಿಗಾಗಿ
2. ಡೀನರು, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಪ್ರಾಚಾರ್ಯರು, ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ, ಕೊನೆಹಳ್ಳಿ/ಶಿಗ್ಗಾಂವ/ಕೋರವಂಗಲ/ಬರ್ಗಿ/ಡೋರ್ನಳ್ಳಿ, ಇವರಿಗೆ ಮಾಹಿತಿಗಾಗಿ ಹಾಗೂ ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳಲು ಕಾಲೇಜಿಗೆ ಬಂದಾಗ ಮೂಲ ಅಂಕಪಟ್ಟಿಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಿದೆ.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕಪಪಮೀವಿವಿ., ಬೀದರ ಇವರ ಮಾಹಿತಿಗಾಗಿ.
5. ಹಿರಿಯ ಆಪ್ತಕಾರ್ಯದರ್ಶಿಗಳು, ಕುಲಪತಿಗಳವರ ಕಛೇರಿ, ಕಪಪಮೀವಿವಿ., ಬೀದರ ಇವರ ಮಾಹಿತಿಗಾಗಿ.

ಕಛೇರಿ ಕಡತ:ಡಿಪ್ಲೋಮಾ